# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 804 (976)

ಮಾನ್ಯ ಸದಸ್ಯರ ಹೆಸರು: ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಉತ್ತರಿಸಬೇಕಾದ ದಿನಾಂಕ: 15.12.2025

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ಪ್ರಾಥಮಿಕ ಶಾಲೆ ಸ್ಥಾಪಿಸಲು ಅನುಸರಿಸುತ್ತಿರುವ ಮಾರ್ಗಸೂಚಿಗಳಾವುವು: ಕಳೆದ 3 ವರ್ಷಗಳಲ್ಲಿ ರಾಜ್ಯದ ಯಾವ ಪ್ರದೇಶಗಳಲ್ಲಿ ಎಷ್ಟು ಹೊಸ ಸರಕಾರಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ: | ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ.77.ಯೋ.ಯೋ.ಕ 2010, ದಿನಾಂಕ: 28.04.2012 ಮತ್ತು ಸಂಖ್ಯೆ: ಸ.ಶಿ.ಅ.ಅಕ್ಸಿಸ್ 46.ಇತರೆ/2012-13, ದಿನಾಂಕ:15.06.2013 ರಂತೆ ಹಾಗೂ ಬೆಂಗಳೂರು ಆಯುಕ್ತಾಲಯದ ಜ್ಞಾಪನ ಪತ್ರ ಸಂಖ್ಯೆ: ಎಡಿ.ಎಂ2(4)ಹೊ.ಶಾ.ಮ.ವಿ.ಪ್ರಾ 6/2022-23, ದಿನಾಂಕ-23.05.2023 ರನ್ವಯ ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ಪ್ರಾಥಮಿಕ ಶಾಲೆ ಸ್ಥಾಪಿಸಲು ಅನುಸರಿಸಲಾಗುತ್ತಿದೆ.<br><br>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವುದೇ ಹೊಸ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಆರಂಭಿಸಿರುವುದಿಲ್ಲ. |
| ಆ) | ಉಡುಪಿ ಜಿಲ್ಲೆಯ ನೀಲಾವರ ಗ್ರಾಮ ಪಂಚಾಯತಿಯ 5 ಕಿ ಮೀ ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಪ್ರಾಥಮಿಕ ಶಾಲೆ ಇಲ್ಲದಿದ್ದರೂ ಈಗಾಗಲೇ ಶಾಲೆಗಾಗಿ ಜಾಗ ಕಾಯ್ದಿರಿಸಿದ್ದರೂ ಈವರೆಗೆ ಸರ್ಕಾರಿ ಪ್ರಾಥಮಿಕ ಶಾಲೆ ಸ್ಥಾಪನೆಯಾಗದಿರಲು ಕಾರಣವೇನು: | ಸರ್ಕಾರದ ಹಂತದಲ್ಲಿ ಈ ಕುರಿತಾದ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. |

| | | |
|---|---|---|
| ಇ) | ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕು ನೀಲಾವರದಲ್ಲಿ ಸರ್ಕಾರಿ ಶಾಲೆ ಸ್ಥಾಪಿಸುವ ಕುರಿತು ಉಡುಪಿ ಜಿಲ್ಲಾ ಉಪ ನಿರ್ದೇಶಕರ ವರದಿ ಶಿಕ್ಷಣ ಇಲಾಖೆಯ ಕೇಂದ್ರ ಕಛೇರಿಗೆ ಯಾವಾಗ ತಲುಪಿದೆ; ತಲುಪಿದಲ್ಲಿ ವಿಳಂಬವಾಗಲು ಕಾರಣ ಯಾರು; ಇದರಿಂದ ಈಗಾಗಲೇ ಪ್ರಾಥಮಿಕ ಶಾಲಾ ವಯಸ್ಸಿನ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವುದಿಲ್ಲವೇ; ಇದಕ್ಕೆ ಜವಾಬ್ದಾರರು ಯಾರು; | ಉದ್ಭವಿಸುವುದಿಲ್ಲ. |
| ಈ) | ಕ್ಷೇತ್ರವನ್ನು ಪ್ರತಿನಿಧಿಸುವ ಜನ ಪ್ರತಿನಿಧಿಗಳು ಪತ್ರ ಬರೆದರೂ, ಈಗಿರುವ ತಾತ್ಕಾಲಿಕ ಕಟ್ಟಡದಲ್ಲಿ 2 ವರ್ಷಗಳವರೆಗೆ ಮುಂದುವರಿಸಿ ನಂತರ ಸರ್ಕಾರಿ ಶಾಲೆ ಸ್ಥಾಪಿಸಲು ಒಡಂಬಡಿಕೆ ಮಾಡಿಕೊಂಡಿದ್ದರೂ ಇದುವರೆಗೂ ಸರ್ಕಾರಿ ಶಾಲೆ ಸ್ಥಾಪಿಸದೆ ಇಲಾಖೆಯ ಹಿರಿಯ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಲು ಕಾರಣವೇನು; ಪ್ರಸ್ತುತ ಯಾವಾಗ ಹೊಸ ಕಟ್ಟಡ ನಿರ್ಮಿಸಿ ಸರ್ಕಾರಿ ಶಾಲೆ ಆರಂಭಿಸಲಾಗುವುದು? | ಇದುವರೆಗೂ ಸರ್ಕಾರಿ ಶಾಲೆ ಸ್ಥಾಪಿಸದೆ ಇಲಾಖೆಯ ಹಿರಿಯ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿರುವುದಿಲ್ಲ. ಪ್ರಸ್ತುತ ದಿನಾಂಕದವರೆಗೆ ಬೆಂಗಳೂರು ಶಾಲಾ ಶಿಕ್ಷಣ ಆಯುಕ್ತಾಲದ ಹಂತದಲ್ಲಿ ಅಪೂರ್ಣ ಪ್ರಸ್ತಾವನೆ ಸ್ವೀಕೃತವಾಗಿದ್ದು, ಈ ಕುರಿತು ಪೂರ್ಣ ಪ್ರಮಾಣದ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಸ್ವೀಕೃತಗೊಂಡಲ್ಲಿ ನಿಯಾಮಾನುಸಾರ ಮುಂದಿನ ಕ್ರಮ ವಹಿಸಲಾಗುವುದು. |

**ಇಪಿ 143 ಪಿಎಂಎ 2025**

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು